ದಿನಾಂಕ 12.09.2018 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀಸವಾಲುಃ- 1ನೇ ಆರೋಪಿ ಪರವಾಗಿ ಶ್ರೀ.ಹೆಚ್.ಎಸ್.ಆರ್. ವಕೀಲರವರಿಂದಃ**

31. ನನ್ನ ಮದುವೆಯಾಗಿ ಸುಮಾರು 18 ವರ್ಷ ಆಯಿತು. ಆ ಲಾಗಾಯಿತಿನಿಂದ ನಾನು ಕೆಂಪವಡೇರಹಳ್ಳಿಯಲ್ಲಿ ವಾಸ ಇದ್ದೇನೆ. ನಮ್ಮ ಮನೆಯಲ್ಲಿ ನನ್ನ ಅತ್ತೆ, ನಾನು, ನನ್ನ ಗಂಡ ಮತ್ತು ಇಬ್ಬರು ಮಕ್ಕಳು ವಾಸವಿದ್ದೇವೆ. ನನ್ನ ಅತ್ತೆ ಆ ಮನೆಯಲ್ಲಿಯೇ ನಮ್ಮ ಜೊತೆಯಲ್ಲಿ ಪ್ರತಿದಿನ ವಾಸವಿದ್ದಾರೆ ಎನ್ನುವುದು ಸರಿ.

32. ದಿನಾಂಕ 17.01.2017 ರಂದು ನನ್ನ ಅತ್ತೆ ನಮ್ಮ ಮನೆಯಲ್ಲಿ ಇರಲಿಲ್ಲ. ಆಕೆ ಬೆಂಗಳೂರಿನಲ್ಲಿರುವ ನನ್ನ ಮಾವನ ಮನೆಗೆ ಹೋಗಿದ್ದರು. ಘಟನೆ ನಡೆದ ಸ್ವಲ್ಪ ಹೊತ್ತಿನಲ್ಲಿಯೇ ಆ ವಿಚಾರವನ್ನು ನಾನು ನನ್ನ ಗಂಡನಿಗೆ ತಿಳಿಸಿದ್ದೇನೆ. ಘಟನೆ ನಡೆದ ಸ್ವಲ್ಪ ಹೊತ್ತಿನಲ್ಲಿ ನನ್ನ ಗಂಡ ಮನೆಗೆ ಬಂದಿದ್ದಾರೆ. ಘಟನೆ ನಡೆದ ನಂತರ ಮಧ್ಯಾಹ್ನ 1.15 ಗಂಟೆಗೆ ನಾನು ಪೊಲೀಸ್ ಠಾಣೆಗೆ ಹೋಗಿದ್ದೇನೆ. ನನ್ನ ಜೊತೆಯಲ್ಲಿ ಠಾಣೆಗೆ ಸುಮಾರು ಜನ ಬಂದಿದ್ದರು, ಗಾಬರಿಯಲ್ಲಿ ಯಾರು ಬಂದಿದ್ದರು ಎಂಬುವುದು ನನಗೆ ಈಗ ನೆನಪಿಲ್ಲ. ಅದೇ ರೀತಿ ನನ್ನ ಗಂಡ ಬಂದಿದ್ದಾರೆಯೇ ಎಂಬುವುದು ಈಗ ನೆನಪಿಲ್ಲ.

33. ನಾನು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಿಶಾನೆ ಪಿ 1 ದೂರನ್ನು ಯಾರು ಬರೆದಿದ್ದಾರೆ ಎಂಬುವುದು ನನಗೆ ಗೊತ್ತಿಲ್ಲ.

ನಿಶಾನೆ ಪಿ 1 ರಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಆನಂತರ ಓದಿದ್ದೇನೆ ಎಂದು ಉತ್ತರಿಸಿದ್ದಾರೆ. ನಿಶಾನೆ ಪಿ 1 ನ್ನು ಬರೆಯುವ ಸಂದರ್ಭದಲ್ಲಿ ನನ್ನ ಗಂಡ ಠಾಣೆಯಲ್ಲಿ ಇದ್ದರು. ಆ ಸಂದರ್ಭದಲ್ಲಿ ಪೊಲೀಸರು ನನ್ನ ಗಂಡನನ್ನು ವಿಚಾರಿಸಿದ್ದಾರೆಯೇ ಎಂಬುವುದನ್ನು ನಾನು ಗಮನಿಸಲಿಲ್ಲ.

34. ಮುಖ್ಯರಸ್ತೆಯ ಬದಿಯಲ್ಲಿಯೇ ನನ್ನ ಮನೆ ಇದೆ ಎನ್ನುವುದು ಸರಿ. ನನ್ನ ಮನೆಯಿಂದ 10 ಅಡಿ ದೂರದಲ್ಲಿ ಅಂಗನವಾಡಿ ಮತ್ತು ಶಾಲೆ ಇದೆ ಎಂದರೆ ಎಷ್ಟು ದೂರದಲ್ಲಿ ಇದೆ ಎಂಬುವುದು ನನಗೆ ಗೊತ್ತಿಲ್ಲ. ನನ್ನ ಮನೆಯ ಪಕ್ಕದಲ್ಲಿಯೇ ಕಟುಕನಪಾಳ್ಯಕ್ಕೆ ಹೋಗುವ ರಸ್ತೆ ಮತ್ತು ರಾಮನಗರದಿಂದ ಮಾಗಡಿಗೆ ಹೋಗುವ ರಸ್ತೆ ಇದೆ ಎಂದರೆ ಮನೆಯಿಂದ ಸ್ವಲ್ಪ ದೂರದಲ್ಲಿ ಇದೆ. ಅಂದಾಜು ಎಷ್ಟು ದೂರದಲ್ಲಿ ಇದೆ ಎಂಬುವುದು ನನಗೆ ಗೊತ್ತಿಲ್ಲ. ನನ್ನ ಮನೆಯ ಪಕ್ಕದಲ್ಲಿಯೇ ಕೆಂಪವಡೇರಹಳ್ಳಿಯಿಂದ ಮಾಗಡಿ ಮತ್ತು ರಾಮನಗರಕ್ಕೆ ಹೋಗಲು ಪ್ರಯಾಣಿಕರು ತಂಗುವ ಬಸ್ ನಿಲ್ದಾಣ ಇದೆ ಎಂದರೆ ಮನೆಯಿಂದ ದೂರದಲ್ಲಿ ಇದೆ. ನಮ್ಮ ಮನೆಯಲ್ಲಿ ಏನೇ ಗಲಾಟೆಯಾದರೂ ಮೇಲೆ ತಿಳಿಸಿದ ಅಂಗನವಾಡಿ, ಶಾಲೆ ಮತ್ತು ಬಸ್ ನಿಲ್ದಾಣಕ್ಕೆ ಕೇಳಿಸುತ್ತದೆ ಎನ್ನುವುದು ಸರಿಯಲ್ಲ.

35. ಕೆಂಪವಡೇರಹಳ್ಳಿಯಿಂದ ರಾಮನಗರಕ್ಕೆ ನನ್ನ ಮನೆಯ ಮುಂದೆ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ಅಷ್ಟೋಂದು ದೊಡ್ಡ ರಸ್ತೆಯಲ್ಲ ಎಂದು ಉತ್ತರಿಸಿದ್ದಾರೆ.

36. ನಾನು 1.15 ಗಂಟೆಗೆ ಠಾಣೆಗೆ ಹೋಗಿದ್ದೇನೆ, ಆನಂತರ ನಾನು ಪೊಲೀಸರನ್ನು ಕರೆದುಕೊಂಡು ಸಂಜೆ 4.30 ಗಂಟೆಗೆ ಮನೆಗೆ ಬಂದಿದ್ದೇನೆ. ನನ್ನ ಜೊತೆಯಲ್ಲಿ ಎಷ್ಟು ಜನ ಪೊಲೀಸರು ಸ್ಥಳಕ್ಕೆ ಬಂದಿದ್ದಾರೆ ಎಂಬುವುದು ಗೊತ್ತಿಲ್ಲ, ಕಾರಣ ನಾನು ಗಾಬರಿಯಲ್ಲಿ ಇದ್ದೆ. ದೂರು ಕೊಡುವಾಗಲೂ ನಾನು ಗಾಬರಿಯಲ್ಲಿ ಇದ್ದೆ. ಆ ಗಾಬರಿಯಲ್ಲಿ ನಾನು ದೂರಿನಲ್ಲಿ ಏನು ತಿಳಿಸಿದ್ದೇನೆ ಎಂಬುವುದು ಗೊತ್ತಿಲ್ಲ ಎಂದರೆ ನನಗೆ ಗೊತ್ತಿರುವಷ್ಟನ್ನು ತಿಳಿಸಿದ್ದೇನೆ.

37. ನನ್ನ ಮನೆಯಲ್ಲಿ ದೇವರ ಕೋಣೆ ಸೇರಿಸಿ 3 ರೂಮುಗಳಿವೆ. ನಾನು ಮತ್ತು ನನ್ನ ಗಂಡ ಮಲಗುವ ಕೋಣೆಯಲ್ಲಿ ಒಡವೆಗಳು ಮತ್ತು ಹಣ ಇಟ್ಟಿದ್ದೆ. ನಾನು ಒಡವೆಗಳನ್ನು ಮತ್ತು ಹಣವನ್ನು ನಾವು ಮಲಗುವ ಕೋಣೆಯಲ್ಲಿದ್ದ ಎರಡು ಕಬ್ಬಿಣದ ಬೀರುವಿನಲ್ಲಿ ಇಟ್ಟಿದ್ದೆ. ಆ ಬೀರುಗಳಿಗೆ ಲಾಕ್ ಮಾಡಿದ್ದೆ. ಅವು ಯಾವ ಕಂಪನಿಯ ಬೀರುಗಳು ಎನ್ನುವುದು ನನಗೆ ಗೊತ್ತಿಲ್ಲ.

38. ಬಂದ ಅಸಾಮಿಗಳು ಬೀರುವನ್ನು ಹೊಡೆದು ಬೀರುವಿನಲ್ಲಿದ್ದ ರೂ.60,000/- ಹಣ, ಒಂದು ಚಿನ್ನದ ನೆಕ್ಲೇಸ್, ಎರಡು ಚಿನ್ನದ ಬಳೆ, ಒಂದು ಚಿನ್ನದ ಬ್ರಾಸ್‌ಲೆಟ್, 20 ಚಿನ್ನದ ಗುಂಡುಗಳು, ಒಂದು ಚಿನ್ನದ ತಾಲಿ, ಎರಡು ಚಿನ್ನದ ಉಂಗುರ, ಎರಡು ಜೊತೆ ಚಿನ್ನದ ಓಲೆಗಳು ಮತ್ತು ಒಂದು ಜೊತೆ ಚಿನ್ನದ

ಸುತ್ತು ಮಾಟಿಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಅದೇ ಬೀರುವಿನಲ್ಲಿ ನಾನು ಉಪಯೋಗಿಸುವಂತಹ ಬಟ್ಟೆಯನ್ನು ಕೂಡ ಇಟ್ಟಿದ್ದೆ ಎನ್ನುವುದು ಸರಿ. ರೊಟ್ಟಿದಬ್ಗೆಯಿಂದ ಹೊಡೆದಾಗ ಬೀರುವಿನ ಲಾಕ್ ಹೊಡೆದು ಹೋಗಿದೆ. ಆದರೆ ಆ ರೀತಿ ಲಾಕ್ ಹೊಡೆದಿದ್ದನ್ನು ನಾನು ಸರಿಯಾಗಿ ಗಮನಿಸಲಿಲ್ಲ. ಮರುದಿನವೂ ಕೂಡ ನಾನು ಬೀರುವಿನ ಲಾಕ್ ಹೊಡೆದು ಹೋಗಿದೆಯೇ ಎಂದು ನಾನು ಗಮನಿಸಲಿಲ್ಲ.

39. ರೂ.60,000/- ಗಳ ನೋಟುಗಳ ಮುಖಬೆಲೆಯನ್ನು ನಾನು ನನ್ನ ದೂರಿನಲ್ಲಿ ತಿಳಿಸಿಲ್ಲ, ಆದರೆ ನನ್ನ ಬೀರುವಿನಲ್ಲಿದ್ದ ರೂ.15,000/- ಗಳ ನೋಟುಗಳ ಮುಖಬೆಲೆಯನ್ನು ತಿಳಿಸಬಲ್ಲೆ. ನಾನು ನನ್ನ ದೂರಿನಲ್ಲಿ ನನ್ನ ಬೀರುವಿನಲ್ಲಿ ರೂ.15,000/- ಇತ್ತು. ಉಳಿಕೆ ಹಣ ನನ್ನ ಗಂಡನ ಬೀರುವಿನಲ್ಲಿ ಇತ್ತು ಎಂದು ತಿಳಿಸಿಲ್ಲ. ನಾನು ಮತ್ತು ನನ್ನ ಗಂಡ ನಮ್ಮ ಸಂಪಾದನೆಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ಇಡುವುದಿಲ್ಲ. ಸಾಕ್ಷಿ ಸ್ವತಃ ನನಗೆ ಯಾವುದೇ ಸ್ವಂತ ಸಂಪಾದನೆ ಇಲ್ಲ ಎಂದು ಉತ್ತರಿಸಿದ್ದಾರೆ.

40. ಘಟನೆ ನಡೆದ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿದ್ದಾರೆ. ಮಹಜರ್ ಕಾಲದಲ್ಲಿ ಬೀರುವಿನ ಲಾಕ್ ಹೊಡೆದಿರುವ ಕುರಿತು ಫೋಟೋ ತೆಗೆದಿದ್ದಾರೆಯೇ ಅಥವಾ ಆ ಕುರಿತು ಬರವಣಿಗೆ ಮಾಡಿಕೊಂಡಿದ್ದಾರೆಯೇ ಎಂಬುವುದನ್ನು ನಾನು ಗಮನಿಸಿಲ್ಲ. ಆ ರೀತಿ ಮಹಜರ್ ಬರೆಯುವಾಗ ನನ್ನ ಮನೆಯಲ್ಲಿ ತುಂಬಾ ಜನರು ಸೇರಿದ್ದರು. ಅಂದರೆ ಸುಮಾರು 50-60 ಜನ

ಇದ್ದರು. ಆ ರೀತಿ ಬಂದವರೆಲ್ಲರೂ ಘಟನೆಯ ಸ್ಥಳದಲ್ಲಿ ಓಡಾಡಿ ವಸ್ತುಗಳನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನಾವು ಹೋಗುವ ವರೆಗೂ ಯಾರು ಮುಟ್ಟಿರಲಿಲ್ಲ ಎಂದು ಉತ್ತರಿಸಿದ್ದಾರೆ.

41. ನಾನು ಮಾಡಿಸುವಾಗ ಮಾಂಗಲ್ಯ ಸರದ ತೂಕ 32 ಗ್ರಾಂ, 4 ಚಿನ್ನದ ಗುಂಡುಗಳು, ಎರಡು ಚಿನ್ನದ ಕಾಸುಗಳು ಮತ್ತು ಒಂದು ಮಾಂಗಲ್ಯ ಇತ್ತು. ನಾನು ನಿಶಾನೆ ಪಿ 1 ದೂರಿನಲ್ಲಿ 50 ಗ್ರಾಂ ಚಿನ್ನದ ಮಾಂಗಲ್ಯ ಸರ ಎಂದು ತಿಳಿಸಿದ್ದೇನೆ ಎನ್ನುವುದು ಸರಿ. ಸಾಕ್ಷಿಯು ಮುಂದುವರಿದು ಎಲ್ಲವನ್ನೂ ಒಟ್ಟಾರೆ ಸೇರಿಸಿ ತಿಳಿಸಿದ್ದೇನೆ ಎಂದು ಉತ್ತರಿಸಿದ್ದಾರೆ. ಚಿನ್ನದ ಸರವನ್ನು ಆಸಾಮಿಗಳು ನನ್ನ ಕುತ್ತಿಗೆಯಿಂದ ಕಟ್ ಮಾಡಿಕೊಂಡರು. ಆ ರೀತಿ ಕಟ್ ಮಾಡಿದಾಗ ಮಾಂಗಲ್ಯ ಸರ ಎರಡು ತುಂಡಾಯಿತು.

42. ನಿಶಾನೆ ಪಿ 1 ದೂರನಲ್ಲಿ ಮಾಂಗಲ್ಯ ಸರದ ಡಿಸೈನ್‌ನ್ನು ತಿಳಿಸಿಲ್ಲ. ದೂರು ಕೊಟ್ಟ ಸುಮಾರು 1 ವರ್ಷದ ನಂತರ ಮಾಂಗಲ್ಯ ಸರವನ್ನು ಪೊಲೀಸರಿಂದ ಬಿಡಿಸಿಕೊಂಡಿದ್ದೇನೆ. ಆನಂತರ ಕಟ್ಟಾದ ಸರವನ್ನು ಬೆಸೆದು ಸರಿ ಮಾಡಿಸಿಕೊಂಡು ನಾನು ಈಗ ಧರಿಸಿಕೊಂಡಿದ್ದೇನೆ.

43. ಘಟನೆ ನಡೆದ 3 ದಿವಸದಲ್ಲಿ ನಾನು ಠಾಣೆಗೆ ಭೇಟಿ ಕೊಟ್ಟು ಮುಂದುವರಿದ ಹೇಳಿಕೆಯನ್ನು ಕೊಟ್ಟಿದ್ದೇನೆ. ಆ ರೀತಿ ಹೇಳಿಕೆಯನ್ನು ಕೊಟ್ಟಾಗ ಪೊಲೀಸರು ನನ್ನ ಮನೆಯಿಂದ ಕಳ್ಳತನವಾದ ಆಭರಣಗಳನ್ನು ಹಾಜರುಪಡಿಸಿದ್ದಾರೆ ಎನ್ನುವುದು ಸರಿಯಲ್ಲ.

44. ನಾನು ದಿನಾಂಕ 20.01.2017 ರಂದು ಪೊಲೀಸ್ ಠಾಣೆಗೆ ಹೋಗಿದ್ದೇನೆ. ದಿನಾಂಕ 03.02.2017 ರಂದು ನಾನು ಮುಂದುವರಿದ ಹೇಳಿಕೆಯನ್ನು ಕೊಡುವಾಗ ಠಾಣೆಯಲ್ಲಿ ಪೊಲೀಸರು ನನಗೆ ಆರೋಪಿಗಳನ್ನು ತೋರಿಸಿದ್ದಾರೆ ಎನ್ನುವುದು ಸರಿಯಲ್ಲ.

45. ಮುದ್ದೆಮಾಲು 5 ರಿಂದ 15 ನ್ನು ಮಾಡಿಸುವಾಗ ನನಗೆ ಅಂಗಡಿಯವರು ರಶೀದಿಗಳನ್ನು ಕೊಟ್ಟಿದ್ದರು. ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ ಮರುಹೇಳಿಕೆಯಲ್ಲಿ ಒಡವೆಗಳನ್ನು ಗುರುತಿಸುವ ಕುರಿತು ಕೆಲವೊಂದು ಒಡವೆಗಳ ಮೇಲೆ ಇನಿಶಿಯಲ್ ಇರುವ ವಿಚಾರವನ್ನು ಪೊಲೀಸರಿಗೆ ತಿಳಿಸಿದ್ದೇನೆ. ಯಾವ ಯಾವ ಒಡವೆಯಲ್ಲಿ ಇನಿಶಿಯಲ್ ಇದೆ ಎಂಬ ವಿಚಾರವನ್ನು ಪೊಲೀಸರು ಮರುಹೇಳಿಕೆಯಲ್ಲಿ ಬರೆದುಕೊಂಡಿಲ್ಲ. ನನ್ನ ಕೆಲವೊಂದು ಒಡವೆಯಲ್ಲಿ ಹೆಚ್.ಜೆ. ಎಂದು ಇನಿಶಿಯಲ್ ಇದೆ. ಕೆಲವೊಂದು ಒಡವೆಗಳಲ್ಲಿ ಹೆಚ್.ಜೆ. ಎಂದು ಇನಿಶಿಯಲ್ ಇರುವ ವಿಚಾರವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ. ಆ ಹೇಳಿಕೆಯನ್ನು ಪೊಲೀಸರು ಬರೆದುಕೊಂಡಿದ್ದಾರೋ ಎಂಬುವುದು ನನಗೆ ಗೊತ್ತಿಲ್ಲ.

46. ನನ್ನ ಕಟ್ಟಿದ ಕೈಯನ್ನು ನರಸಿಂಹಮೂರ್ತಿ ಉಃ ತಮ್ಮಯ್ಯ ಬಿಡಿಸಿದ್ದಾರೆ. ಮುದ್ದೆಮಾಲು 3 ಟೇಪು ಮಕ್ಕಳು ಪುಸ್ತಕವನ್ನು ಬೈಂಡ್ ಮಾಡಲು ತಂದ ಟೇಪು ಎನ್ನುವುದು ಸರಿಯಲ್ಲ. ಮುದ್ದೆಮಾಲು 2 ನಮ್ಮ ಮನೆಯಲ್ಲಿ ಬಳಸುವ ರೊಟ್ಟಿ ದಬ್ಬೆ ಎನ್ನುವುದು ಸರಿ. ಮುದ್ದೆಮಾಲು 1 ನಾನು

ಬಳಸುತ್ತಿದ್ದಂತಹ ತರಕಾರಿ ತುಂಡರಿಸುವ ಚಾಕು ಎನ್ನುವುದು ಸರಿಯಲ್ಲ. ಮುದ್ದೆಮಾಲು 4 ನನ್ನ ಗಂಡ ಉಪಯೋಗಿಸುತ್ತಿದ್ದ ಟವಲ್ ಎನ್ನುವುದು ಸರಿಯಲ್ಲ. ಮುದ್ದೆಮಾಲು 1 ರಿಂದ 4 ನ್ನುದೂರು ಕೊಡುವ ಸಂದರ್ಭದಲ್ಲಿ ನಾನು ಠಾಣೆಯಲ್ಲಿ ಹಾಜರುಪಡಿಸಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಮಹಜರ್ ಮಾಡುವ ಸಂದರ್ಭದಲ್ಲಿ ಪೊಲೀಸರು ತೆಗೆದುಕೊಂಡಿದ್ದಾರೆ ಎಂದು ಉತ್ತರಿಸಿದ್ದಾರೆ.

47. ನಾನು ಉಪಯೋಗಿಸುತ್ತಿದ್ದ ಮೊಬೈಲ್ ನಂಬರ್ 9611781315 ಆಗಿತ್ತು. ನನ್ನ ಗಂಡ ಉಪಯೋಗಿಸುತ್ತಿದ್ದ ಮೊಬೈಲ್ ನಂಬರ್ 9731310988 ಆಗಿತ್ತು. ಆ ಮೊಬೈಲ್ ನನ್ನ ಗಂಡನ ಬಳಿಯೇ ಇರುತ್ತದೆ ಎನ್ನುವುದು ಸರಿ. ನಾನು ಉಪಯೋಗಿಸುತ್ತಿದ್ದ ಏರ್‌ಟೆಲ್ ನಂಬರ್ ನನ್ನ ಬಳಿಯೇ ಇತ್ತು. 9916614782 ನಂಬರ್ ನನ್ನ ಲಾವಾ ಮೊಬೈಲ್‌ನಲ್ಲಿ ಇತ್ತು. ಆದರೆ ಅದರ ನಂಬರ್ ನನಗೆ ಗೊತ್ತಿಲ್ಲ. 7996839268 ನಂಬರ್‌ನ್ನು ಸ್ಯಾಮ್‌ಸಂಗ್ ಮೊಬೈಲ್‌ಗೆ ಹಾಕಿ ಇಟ್ಟಿದ್ದೆವು. ಅದನ್ನು ಯಾರು ಉಪಯೋಗಿಸುತ್ತಿರಲಿಲ್ಲ. ಆ ಎರಡೂ ನಂಬರ್‌ಗಳು ನನಗೆ ಬಾಯಿಪಾಠ ಇರಲಿಲ್ಲ. ದೂರು ಕೊಡುವಾಗ ಅಂದಾಜಿನ ಮೇಲೆ ಆ ನಂಬರ್‌ನ್ನು ತಿಳಿಸಲಾಗಿದೆ ಎನ್ನುವುದು ಸರಿಯಲ್ಲ. ಬೇರೆ ಯಾರೋ ಮೊಬೈಲ್‌ನ್ನು ನೋಡಿ ಆ ನಂಬರ್‌ನ್ನು ತಿಳಿಸಿದ್ದಾರೆ. ಆ ನಂಬರ್‌ನ್ನು ಮಹಜರ್ ಮಾಡುವಾಗ ಕೊಟ್ಟಿದ್ದಾರೆ. ಆ ನಂಬರ್‌ಗಳನ್ನು ದೂರು ಕೊಡುವ ಸಂದರ್ಭದಲ್ಲಿ ಪೊಲೀಸರಿಗೆ ತಿಳಿಸಿದ್ದೇವೆ. ಆ ನಂಬರ್‌ನ್ನು ನನ್ನ ಮಾವನ ಮಗ

ಕೊಟ್ಟಿದ್ದಾನೆ. ನಂಬರ್ ಕುರಿತು ಪೊಲೀಸರು ನನ್ನ ಮಾವನ ಮಗನನ್ನು ವಿಚಾರಣೆ ಮಾಡಿದ್ದಾರೆಯೇ ಎಂಬುವುದು ನನಗೆ ಗೊತ್ತಿಲ್ಲ.

48. ಬೀರುವಿನ ಕುರಿತು ಪೊಲೀಸರು ಮಹಜರ್ ಬರೆದಿಲ್ಲ ಎನ್ನುವುದು ಸರಿಯಲ್ಲ. ನಿಶಾನೆ ಪಿ 2 ರಲ್ಲಿ ಮಹಜರ್ ಮಾಡಿದ ಚಕ್ಕುಬಂಧಿಯನ್ನು ಪೂರ್ವ ದಿಕ್ಕಿಗೆ ಕಟುಕನಪಾಳ್ಯದಿಂದ ಕೆಂಪವಡೇರಹಳ್ಳಿಗೆ ಹೋಗುವ ಟಾರ್ ರಸ್ತೆ, ಉತ್ತರಕ್ಕೆ ಶಿವಗಂಗಯ್ಯನವರ ಜಮೀನು, ದಕ್ಷಿಣಕ್ಕೆ ಯಡಿಯೂರಪ್ಪನವರ ಜಮೀನು ಹಾಗು ಪಶ್ಚಿಮಕ್ಕೆ ಗಂಗಣ್ಣನವರ ಜಮೀನು ಎಂದು ಬರೆದಿದ್ದು ಅದಕ್ಕೆ ನಾನು ರುಜು ಮಾಡಿದ್ದೇನೆ ಎನ್ನುವುದು ಸರಿ. ಆ ಚಕ್ಕುಬಂಧಿ ನನ್ನ ಮನೆಯ ಹೊರಭಾಗದ ಚಕ್ಕುಬಂಧಿ ಎನ್ನುವುದು ಸರಿ. ಪೊಲೀಸರು ಮನೆಯ ಹೊರಭಾಗದಲ್ಲಿ ನಿಂತು ಚಕ್ಕುಬಂಧಿಯನ್ನು ಬರೆದಿದ್ದಾರೆ ಎನ್ನುವುದು ಸರಿಯಲ್ಲ.

49. ಮಹಜರ್ ಸಂದರ್ಭದಲ್ಲಿ ಪ್ರತ್ಯೇಕವಾದ ನಾನು ರೂ.15,000/- ಇಟ್ಟಿದ್ದೆ ಮತ್ತು ರೂ.45,000/- ನನ್ನ ಗಂಡ ಇಟ್ಟಿದ್ದರು ಎಂದು ತಿಳಿಸಿಲ್ಲ. ಆದರೆ ಒಟ್ಟು ರೂ.60,000/- ಎಂದು ತಿಳಿಸಿದ್ದೆ. ಸದರಿ ರೂ.60,000/- ಹಣವನ್ನು ನಾನು ಠಾಣೆಯಿಂದ ಬಿಡಿಸಿಕೊಂಡಿಲ್ಲ. ನಾನು ರೂ.20,000/-ವನ್ನು ಬಿಡುಗಡೆ ಮಾಡಿಕೊಂಡಿದ್ದೇನೆ. ರೂ.60,000/- ಗಳ ಮುಖಬೆಲೆಯನ್ನು ಪಂಚನಾಮೆಯ ಕಾಲದಲ್ಲಿ ತಿಳಿಸಿದ್ದೇನೆಯೇ ಎಂಬುವುದು ಈಗ ನೆನಪಿಲ್ಲ. ನಾನು ಬಿಡಿಸಿಕೊಂಡ ರೂ.20,000/- ಯ ನೋಟುಗಳ ಮುಖಬೆಲೆ ನನಗೆ ಗೊತ್ತಿಲ್ಲ. ಆ ದಿವಸ ಬಿಡಿಸಿಕೊಂಡು ರೂ.20,000/- ವನ್ನು ಈ ದಿವಸ ನ್ಯಾಯಾಲಯಕ್ಕೆ

ಹಾಜರುಪಡಿಸಿಲ್ಲ. ಆ ರೀತಿ ರೂ.20,000/- ವನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡಿದ್ದಾರೆ.

50. ಘಟನೆ ನಡೆದ ಒಂದೂವರೆ ತಿಂಗಳಿನ ನಂತರದಲ್ಲಿ ತಹಶೀಲ್ದಾರರು ನನಗೆ ನೋಟೀಸ್ ಕೊಟ್ಟಿದ್ದಾರೆ. ಆ ನೋಟೀಸ್‌ನ್ನು ಪೊಲೀಸರು ಜಾರಿ ಮಾಡಿದ್ದಾರೆ. ನೋಟೀಸ್ ಕೊಟ್ಟ ಎಷ್ಟು ದಿವಸದ ನಂತರ ನಾನು ಜೈಲಿಗೆ ಹೋಗಿದ್ದೇನೆ ಎಂಬುವುದು ನನಗೆ ಈಗ ನೆನಪಿಲ್ಲ. ನನ್ನ ಜೊತೆಯಲ್ಲಿ ಜೈಲಿಗೆ ನರಸಿಂಹಮೂರ್ತಿ ಅಲಿಯಾಸ್ ತಮ್ಮಯ್ಯ ಮತ್ತು ಸಿದ್ದರಾಜು ಬಂದಿದ್ದರು. ಮೂರು ಜನರನ್ನು ಒಂದೇ ಕಡೇ ಕೂರಿಸಿ ಆರೋಪಿಗಳನ್ನು ಹಾಜರುಪಡಿಸಿದ್ದಾರೆ ಎನ್ನುವುದು ಸರಿಯಲ್ಲ. ನನಗೆ ತಹಶೀಲ್ದಾರರು ಯಾವುದೇ ನೋಟೀಸ್ ನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

51. ನಾನು ಜೈಲಿಗೆ ಹೋಗಿಲ್ಲ ಮತ್ತು ಆರೋಪಿಗಳ ಗುರುತು ಹಚ್ಚುವ ಪ್ರಕ್ರಿಯೆಯಲ್ಲಿ ಭಾಗಿಯಾಗಿಲ್ಲ ಎನ್ನುವುದು ಸರಿಯಲ್ಲ.

**ಮುಂದುವರಿದ ಪಾಟೀಸವಾಲನ್ನು 3 ಗಂಟೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

ದಿನಾಂಕ 12.09.2018 ರಂದು ಮಧ್ಯಾಹ್ನ 3.20 ಗಂಟೆಗೆ ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀಸವಾಲುಃ- 1ನೇ ಆರೋಪಿ ಪರವಾಗಿ ಶ್ರೀ.ಹೆಚ್.ಎಸ್.ಆರ್. ವಕೀಲರವರಿಂದಃ**

52. ನಾನು ನಿಶಾನೆ ಪಿ1 ದೂರು ಕೊಡುವ ಸಂದರ್ಭದಲ್ಲಿ "ಆ ಸಂದರ್ಭದಲ್ಲಿ ನಾನು ದಿವಾನದ ಮೇಲೆ ಬಡಿದುಕೊಳ್ಳುತ್ತಾ ಇದ್ದೆ, ನನ್ನ ಮನೆ ಮುಖ್ಯರಸ್ತೆಯ ಬದಿಯಲ್ಲಿಯೇ ಇದೆ, ನಾನು ಬಾಯಿ ಬಡಿದುಕೊಳ್ಳುತ್ತಿದ್ದ ಶಬ್ಧ ಕೇಳಿದ ತಮ್ಮಯ್ಯ ರವರು ನನ್ನ ಮನೆಗೆ ಬಂದರು. ಅವರು ಬಂದು ತಾಯಿ ತಾಯಿ ಎಂದು ಕರೆದರು, ಆಗ 3 ಜನ ಆರೋಪಿಗಳು ತಮ್ಮಯ್ಯ ರವರನ್ನು ಎಳೆದು ಚಾಕು ತೋರಿಸಿ ಸೋಪಾದ ಮೇಲೆ ಕೂರಿಸಿದರು, ಆನಂತರ ಹಿಂಭಾಗದ ಬಾಗಿಲಿನಿಂದ ಆ 3 ಜನ ಆರೋಪಿಗಳು ಕ್ವಾಲೀಸ್ ಕಾರಿನಲ್ಲಿ ಹೊರಟು ಹೋದರು, ಆ ಕ್ವಾಲೀಸ್ ಕಾರಿನ ನಂಬರ್‌ನ್ನು ನನಗೆ ನೋಡಲು ಆಗಲಿಲ್ಲ" ಎಂಬ ವಿಚಾರವನ್ನು ನಾನು ತಿಳಿಸಿದ್ದೇನೆ. ಆ ರೀತಿಯ ಹೇಳಿಕೆಯನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

53. ನಿಶಾನೆ ಪಿ 1 ರಲ್ಲಿ ಉಲ್ಲೇಖಿಸಿರುವ ಒಡವೆಗಳಲ್ಲಿ ಕೆಲವು ಒಡವೆಗಳು ನನಗೆ ಸೇರಿದ್ದು, ಕೆಲವು ಒಡವೆಗಳನ್ನು ನನ್ನ ತಾಯಿ ಮೃತಪಟ್ಟಿದ್ದರಿಂದ ನನ್ನ ತವರು ಮನೆಯವರು ನನಗೆ ಕೊಟ್ಟಿದ್ದಾರೆ. ಕೆಲವು ಒಡವೆಗಳನ್ನು ನನ್ನ ತವರು ಮನೆಯವರು ಕೊಟ್ಟಿದ್ದಾರೆ ಎಂದು ನಾನು ನನ್ನ ಮರುಹೇಳಿಕೆಯಲ್ಲಿ ತಿಳಿಸಿದ್ದೇನೆ. 20 ಗುಂಡುಗಳು, ಒಂದು ಜೊತೆ ಓಲೆ ಮತ್ತು

ಒಂದು ಮಾಂಗಲ್ಯ ನನ್ನ ತಾಯಿಯದ್ದು ಎಂದು ನಾನು ನನ್ನ ಮರುಹೇಳಿಕೆಯಲ್ಲಿ ತಿಳಿಸಿದ್ದೇನೆ.

54. ನಾನು ಸೀಮೆ ಹಸುಗಳನ್ನು ಸಾಕಿ ಹಾಲು ಮಾರಾಟ ಮಾಡಿ ಬಂದ ಹಣದಿಂದ ಒಡವೆಗಳನ್ನು ಖರೀದಿ ಮಾಡಿದ್ದೇನೆ. ಸೀಮೆ ಹಸುವಿನ ಕರುಗಳನ್ನು ನಮ್ಮ ಮನೆಯಲ್ಲಿ ನಾವೆಲ್ಲರೂ ಸೇರಿಕೊಂಡು ಮಾತನಾಡಿ ಮಾರಾಟ ಮಾಡಿದ್ದೇವೆ. ನಾವೆಲ್ಲರೂ ಸೇರಿಕೊಂಡು ಸೀಮೆ ಹಸುವಿನ ಕರುವನ್ನು ಮಾರಾಟ ಮಾಡಿದ್ದೇವೆ ಎಂದು ನಿಶಾನೆ ಪಿ 1 ದೂರಿನಲ್ಲಿ ತಿಳಿಸಿಲ್ಲ. ಸೀಮೆ ಹಸುವಿನ ಕರುವನ್ನು 1 ನೇ ಆರೋಪಿ ಖರೀದಿ ಮಾಡಿದ್ದರು ಎನ್ನುವುದು ಸರಿಯಲ್ಲ. ಆ ಕರುವನ್ನು ಕರೆದುಕೊಂಡು ಹೋಗಲು 1 ನೇ ಆರೋಪಿ ಬಂದಾಗ ನಾವು ಕರುವನ್ನು ಕೊಡದೇ 1 ನೇ ಆರೋಪಿಯ ವಿರುದ್ಧ ಸುಳ್ಳು ದೂರನ್ನು ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ.

55. ಆ ದಿವಸ ನಮ್ಮ ಮನೆಯಿಂದ ಯಾವುದೇ ಒಡವೆಗಳನ್ನು ದರೋಡೆ ಮಾಡಿಲ್ಲ ಎನ್ನುವುದು ಸರಿಯಲ್ಲ. ಆ ರೀತಿ ದರೋಡೆ ಆಗಿದ್ದರೆ ಬೀರುವಿನ ಛಾಯಾಚಿತ್ರಗಳನ್ನು ತೆಗೆಯಲಾಗುತ್ತಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಆ ರೀತಿ ಆಗಿರದೇ ಇದ್ದರೆ ನಾವು ಯಾಕೆ ದೂರು ಕೊಡುತ್ತಿದ್ದೆವು ಎಂದು ಉತ್ತರಿಸಿದ್ದಾರೆ. ನಮ್ಮ ಮನೆಗೆ ಯಾವುದೇ ಕ್ವಾಲೀಸ್ ಕಾರು ಬರಲಿಲ್ಲ ಎನ್ನುವುದು ಸರಿಯಲ್ಲ. ಕರುವನ್ನು 1 ನೇ ಆರೋಪಿಗೆ ಕೊಡಬೇಕಾದೀತು ಎಂಬ ದುರುದ್ದೇಶದಿಂದ ನಮ್ಮ ಮನೆಯಲ್ಲಿ ದರೋಡೆ ಮಾಡಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು

ಸರಿಯಲ್ಲ. ಆರೋಪಿಗಳು ನನ್ನ ಕೈಕಾಲು ಕಟ್ಟಿ ಹಾಕಿದರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಆ ರೀತಿ ಕೈಕಾಲು ಕಟ್ಟಿ ಹಾಕಿ ಮಾಂಗಲ್ಯ ಸರವನ್ನು ಕಸಿದುಕೊಂಡಿದ್ದರೆ ನನಗೆ ಗಾಯಗಳಾಗುತ್ತಿದ್ದವು ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗಾಯಗಳಾಗಿದ್ದವು, ಸುಳ್ಳು ದೂರು ಯಾಕೆ ಕೊಡಲಿ ಎಂದು ಉತ್ತರಿಸಿದ್ದಾರೆ.

56. ನಾನು ಹಾಜರುಪಡಿಸಿದ ಒಡವೆಗಳು ಯಥಾ ರೀತಿಯಲ್ಲಿ ಇದ್ದರೂ ಕೂಡ ಅವುಗಳನ್ನು ಆರೋಪಿಗಳು ದರೋಡೆ ಮಾಡಿಕೊಂಡು ಹೋಗಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ನಿಶಾನೆ ಪಿ 2 ಮಹಜರ್‌ನ್ನು ಠಾಣೆಯಲ್ಲಿ ಬರೆಯಲಾಗಿದೆ ಎನ್ನುವುದು ಸರಿಯಲ್ಲ. ಸಾಕ್ಷಿಯು ಸ್ವತಃ ಕಳ್ಳತನವಾದ ಜಾಗದಲ್ಲಿ ಅಂದರೆ ನನ್ನ ಮನೆಯಲ್ಲೇ ಅದನ್ನು ಬರೆದಿದ್ದಾರೆ ಎಂದು ಉತ್ತರಿಸಿದ್ದಾರೆ.

**ಪಾಟೀಸವಾಲುಃ ಉಳಿದ ಆರೋಪಿಗಳ ಪರವಾಗಿಃ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.